

ಬಿ.ಎಲ್. ವೇಣು

# ಧರಣಿಮಂಡಲ ದುರ್ಗದೊಳಗೆ

ಮಗ ಮಾದನಿಂದ ಒರಳುಕಲ್ಲು, ರುಬ್ಬೋಗುಂಡು ಎರಡನ್ನೂ ಹೆಗಲಮೇಲೆ ಹೊರೆಸಿಕೊಂಡು ಬಂದ ವಡ್ಡರ ನಿಂಗ ದೊಡ್ಡಪೇಟೆ ಬೀದಿಯ ಉಯ್ಯಾಲೆಕಂಬದ ಬಳಿ ಇರುವ ಇಟ್ಟಿಗೇರ ಬಸಯ್ಯನ ಮನೆ ಅಂಗಳಕ್ಕೆ ಬಂದು ಭಯಭಕ್ತಿಯಿಂದ ನಿಂತು, ಯಾರಾರ ಈಚೆಕಡೆ ಬಂದು ತಮ್ಮನ್ನು ನೋಡಿಯಾರೇ ಎಂಬಾಶೆಯಿಂದ ಕಾದ. ಕೂಗಿ ಕರೆಯೋಕೂ ದಿಗಿಲು. ಭಾರ ಹೊತ್ತಿದ್ದ ಮಾದ ಅಪ್ಪನತ್ತ ನೋಡಿದ. ವಲ್ಲಿ ಸುತ್ತಿಟ್ಟುಕೊಂಡಿದ್ದರೂ ಹೆಗಲು ನೋಯುತ್ತಿರಲಾಗಿ ದುಸುಮುಸು ಮಾಡಿದ. ನಿಂಗನೀಗ ಅಳುಕುತ್ತಲೇ 'ಸ್ವಾಮೇ ಸ್ವಾಮೇರಾ' ದನಿ ತಗ್ಗಿಸಿ ಕೂಗಿದ. ಸ್ವಲ್ಪ ಹೊತ್ತಿನ ಬಳಿಕ ಇಟ್ಟಗಿ ಬಸಯ್ಯನೇ ಒಳಗಿನಿಂದ ದುಡುದುಡು ಈಚೆ ಬಂದ. ಹಣೆ ಕೈಮೈ ತುಂಬಾ ಡಾಳಾಗಿ ಈಬತ್ತಿ ಮೂರೆಳೆ ಇಕ್ಕಂಡಿದ್ದ. 'ಸುಡುಗಾಡು ಸೂಳಿಮಕ್ಕಾ, ಶಿವಪೂಜೆ ಕೆಡಿಸಿಬಿಟ್ರಲ್ಲಲೇ... ಬರೋತಂಕ ಬಿದ್ದಿರೋಕೇನ್ರಲೇ ಧಾಡಿ' ಸಣ್ಣಗೆ ರೇಗಾಡಿದ. ಆ ಬಗ್ಗೆ ತಲೆಕೆಡಿಸಿಕೊಳ್ಳದ ನಿಂಗ, ಅಲ್ಲೇ ಕದದ ಸಂದೀಲಿ ಒರಳುಕಲ್ಲು ರುಬ್ಬೋಗುಂಡನ್ನು ಸದ್ದಾಗದಂತೆ, ನೆಲದ ಸಾರಣೆ ಮುಕ್ಕಾಗದಂತೆ ಕೆಳಗಿಳಿಸಲು ನೆರವಾದ. ಮಾದ ಬೆವರು ವರೆಸಿಕೊಳ್ಳುವಾಗಲೇ, 'ಗಂಗಾ, ವಡ್ಡರನಿಂಗ ಒಳಕಲ್ಲು ತಂದವ್ನೆ...